# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ.14582/2001

| | |
|---|---|
| ಸಾಕ್ಷಿದಾರರ ಹೆಸರು : | ಡಿ. ಪುಟ್ಟಸ್ವಾಮಿ |
| ತಂದೆಯ ಹೆಸರು : | ಲೇಟ್. ಸಿ. ದುರ್ಗೆಗೌಡ |
| ವಯಸ್ಸು : | 65 ವರ್ಷ |
| ಉದ್ಯೋಗ : | ನಿವೃತ್ತ ಎ.ಎಸ್.ಐ |
| ವಾಸ : | ಕನಕಪುರ ರೋಡ, ಯಲಚೇನಹಳ್ಳಿ, ಬೆಂಗಳೂರು. |

**ದಿನಾಂಕ 06/03/2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ದಂ.ಪ್ರ.ಸಂ.ಕಲಂ. 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ**

1. ನಾನು 2011 ರಿಂದ 2016 ರವರೆಗೆ ಮೈಕೋ ಲೇಔಟ್ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದ ಆರೋಪಿಯ ವಿರುದ್ದ ಉದ್ಘೋಷಣೆ ಮಾಡುವಂತೆ ನ್ಯಾಯಾಲಯದಿಂದ ಆದೇಶ ಬಂದಿದ್ದು. ಠಾಣಾಧಿಕಾರಿಯವರು ಉದ್ಘೋಷಣೆ ಮಾಡುವಂತೆ ನನಗೆ ನಿಯೋಜಿಸಿರುತ್ತಾರೆ.

2. ಅದರಂತೆ ದಿನಾಂಕ 29/10/2014 ರಂದು ಆರೋಪಿಯ ವಿಳಾಸ ನಂ.176, 28 ನೇ ಮುಖ್ಯ ರಸ್ತೆ, ಬಿ.ಟಿ.ಎಮ್. ಬಡಾವಣೆ 2ನೇ ಹಂತ, ಬೆಂಗಳೂರ ಎಂಬಲ್ಲಿಗೆ ಹೋಗಿ ಆರೋಪಿಯ ಬಗ್ಗೆ ವಿಚಾರಿಸಿದಾಗ ಯಾವುದೇ ಮಾಹಿತಿ ದೊರೆಯಿಲಿಲ್ಲ. ಪಂಚರಾದ ಬಸವರಾಜ ಮತ್ತು ಇನ್ನೊಬ್ಬ ಪಂಚರನ್ನು ಕರೆಯಿಸಿ ಅವರ ಸಮಕ್ಷಮ ಸ್ಥಳದಲ್ಲಿ ಸದರಿ ಆರೋಪಿಯ ವಿರುದ್ದ ಉದ್ಘೋಷಣೆಯನ್ನು ಘೋಷಿಸಿ ಸದರಿ ಆರೋಪಿ ಕಂಡು ಬಂದಲ್ಲಿ ಹಾಗೂ ಆತನ ಮಾಹಿತಿ ತಿಳಿದಲ್ಲಿ ಕೂಡಲೇ ನ್ಯಾಯಾಲಯಕ್ಕಾಗಲೀ ಅಥವಾ ಮೈಕೋ ಲೇಔಟ್ ಪೊಲೀಸ್ ಠಾಣೆಗೆ ತಿಳಿಸಬೇಕೆಂದು

ಸಾರ್ವಜನಿಕವಾಗಿ ಕೂಗಿ ಹೇಳಿ ಘೋಷಿಸಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ಸದರಿ ವಾಸದ ಗೋಡೆಯ ಮೇಲೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ. ಸ್ಥಳದಲ್ಲಿ ಬೆಳಿಗ್ಗೆ 11.00 ಗಂಟೆಯಿಂದ 12.00 ಗಂಟೆಯವರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ತಯಾರಿಸಿ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಉದ್ಘೋಷಣೆಯ ಆದೇಶ ಮತ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ **ಉದ್ಘೋಷಣೆಯ ಆದೇಶವನ್ನು ನಿಪಿ-2 ಎಂದು, ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)

ಮು.ಮ.ದಂ.ನ್ಯಾ.ಬೆಂ.ನಗರ.